**(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**
**ಪಾಟೀ ಸವಾಲುಃ ಶ್ರೀಮತಿ ಸಿಡಿಬಿ, 2ನೇ ಎದುರುದಾರ ಪರ ವಕೀಲರಿಂದ**

ನಾನು ಅನಕ್ಷರಸ್ಥ. ನನಗೆ ಗೌತಮ್ ಮತ್ತು ಚಂದನ್ ಎಂಬ ಇಬ್ಬರು ಮಕ್ಕಳು ಇರುತ್ತಾರೆ. ನನ್ನ ಮೊದಲ ಮಗ ಗೌತಮನಿಗೆ 24 ವರ್ಷ, ನನ್ನ 2ನೇ ಮಗ ಚಂದನ್ ಸಾಯುವ ವೇಳೆಯಲ್ಲಿ ಅವನಿಗೆ 19 ವರ್ಷ ವಯಸ್ಸಾಗಿತ್ತು.

ದಿಃ20.10.2020ರಂದು ನನ್ನ ಮಗ ಚಂದನ್ ಹೊಂಡ ಡಿಯೋ ಮೋಟರ್ ಸೈಕಲ್‌ನಲ್ಲಿ ಹಲಸಿನಮರದ ದೊಡ್ಡಿಗೆ ಹೋಗಿದ್ದನು. ಸದರಿ ಮೋಟರ್ ಸೈಕಲ್ 1ನೇ ಎದುರುದಾರ ಸುರೇಶ್ ರವರಿಗೆ ಸೇರಿತ್ತು. ನನ್ನ ಮಗ ಚಂದನ್‌ಗೆ ಗಾಡಿ ಓಡಿಸಲು ಚಾಲನ ಪರವಾನಗಿ ಇರಲಿಲ್ಲ. ಆದರೆ ದಿಃ20.10.2020ರಂದು ಹೊಂಡ ಡಿಯೋ ಮೋಟರ್ ಸೈಕಲ್‌ನ್ನು 3ನೇ ಎದುರುದಾರಾದ ವೆಂಕಟೇಗೌಡ ರವರು ಚಾಲನೆ ಮಾಡುತ್ತಿದ್ದರು. ನನ್ನ ಮಗನಿಗೆ ಅಪಘಾತವಾದ ಬಗ್ಗೆ ರಾಜೇಂದ್ರ ಎಂಬುವವರು ಮಾಹಿತಿ ನೀಡಿರುತ್ತಾರೆ. ನಂತರ ನಾನು ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ಅಪಘಾತವಾದ ತಕ್ಷಣ ನನ್ನ ಮಗ ಚಂದನ್‌ನ್ನು ಬೆಂಗಳೂರಿನ ದಿಗ್ವಿಜಯ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತೇವೆ. ಆ ಸಮಯದಲ್ಲಿ ಆಸ್ಪತ್ರೆಯ ಸಿಬ್ಬಂದಿಗಳಿಗೆ ಅಪಘಾತವಾದ ಬಗ್ಗೆ ಮಾಹಿತಿಯನ್ನು ನೀಡಿರುತ್ತೇವೆ. ನನ್ನ ಮಗ ಚಂದನ್ ಆಸ್ಪತ್ರೆಗೆ ದಾಖಲಿಸಿದ ಮರುದಿವಸ ತೀರಿಕೊಂಡಿರುತ್ತಾನೆ. ನಾನು 1 ಮತ್ತು 3ನೇ ಎದುರುದಾರರೊಂದಿಗೆ ಸೇರಿಕೊಂಡು ಪೊಲೀಸರಿಗೆ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸತ್ಯವನ್ನು ಮರೆಮಾಚಿ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ 2ನೇ ಎದುರುದಾರರಿಂದ ಪರಿಹಾರ ಪಡೆಯಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾಗುವ ಸಮಯದಲ್ಲಿ ನನ್ನ ಮಗ ಚಂದನ್ ವ್ಯವಸಾಯ ಮ ಾಡಿಕೊಂಡಿದ್ದನು. ನನಗೆ ಸೇರಿದ ಸ್ವಂತ ಜಮೀನು ಇರುತ್ತದೆ. ನನ್ನ ಮಗ ಚಂದನ್ ಅಪಘಾತವಾಗುವ ಸಮಯದಲ್ಲಿ ಮಾಸಿಕವಾಗಿ 20,000/- ರೂಪಾಯಿಗಳನ್ನು ದುಡಿಯುತ್ತಿದ್ದನು ಎಂಬುದರ ಬಗ್ಗೆ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ನೀಡಿದ ಚಿಕಿತ್ಸಾ ವೆಚ್ಚದ ಬಿಲ್‌ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಚಂದನ್ ರವರ ತಪ್ಪಿನಿಂದ ಅಪಘಾತವಾಗಿದ್ದು, 2ನೇ ಎದುರುದಾರರ ಪರಿಹಾರವನ್ನು ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

(**ಕುಮಾರ್.ಹೆಚ್.ಎನ್**)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.